<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>

ಸಿ.ಸಿ. ನಂಃ 206/2015 ಸಿಡಬ್ಲೂ : 8 ಪಿಡಬ್ಲೂಃ 5

ಪ್ರಮಾಣವಚನ ಬೋಧಿಸಲಾಯಿತು ದಿಃ13-03-2026

ಹೆಸರು : ಬಾಪುಗೌಡ

ತಂದೆ ಹೆಸರು : ಸಿದ್ದನಗೌಡ ಪಾಟೀಲ್

ವಯಸ್ಸು : 41 ವರ್ಷ

ಉದ್ಯೋಗ : ಪಿ ಐ ಲೋಕಾಯುಕ್ತ ಆದೇಶದಲ್ಲಿರುವವರು

ವಾಸಸ್ಥಳ : ಬೀದರ್

**: ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :**

ನಾನು 01-10-2014 ರಿಂದ 08-06-2016 ವರೆಗೂ ಸೇಡಂ ಪಿ ಎಸ್ ನಲ್ಲಿ ಪಿ ಎಸ್ ಐ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ09-11-2014 ರಂದು ಸದರಿ ಪ್ರಕರಣದ ಕಡತವನ್ನು ಗೌರಿಶಂಕರ್ ರವರಿಂದ ಪಡೆದುಕೊಂಡು, ಅದೇ ದಿನ ಚಾ ಸಾ 2 ಮತ್ತು 3 ರವರ ಸಮಕ್ಷಮ ಜಪ್ತಿ ಪಂಚನಾಮೆಯನ್ನು ಜರುಗಿಸಿ ನೃಪತುಂಗಾ ಕಾಲೇಜಿನಿಂದ ರಶೀದಿ ಪುಸ್ತಕ ಸಂಖ್ಯೆ 701 ರಿಂದ 800 ವರೆಗಿನ ಪುಸ್ತಕವನ್ನು, ನೃಪತುಂಗಾ ಪ್ರಥಮ ದರ್ಜೆ ವಿದ್ಯಾಲಯದ 2013 ನೇ ಸಾಲಿನ ಪುಸ್ತಕ ಸಂಖ್ಯೆ 5001 ರಿಂದ 5200 ವರೆಗೂ ಮತ್ತು ನೃಪತುಂಗಾ ಪ್ರಥಮ ದರ್ಜೆ ವಿದ್ಯಾಲಯದ 2012-2013 ನೇ ಸಾಲಿನ ಪುಸ್ತಕ ಸಂಖ್ಯೆ 5401 ರಿಂದ 5600 ವರೆಗೂ ಪುಸ್ತಕವನ್ನು ಜಪ್ತಿ ಪಡಿಸಿಕೊಂಡಿರುತ್ತೇನೆ. ಸಾಕ್ಷಿಯು ಸದರಿ ಪಂಚನಾಮೆಯನ್ನು ಈಗ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 14 ಎಂದು ಗುರುತಿಸಲಾಗಿದೆ ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 14(ಬಿ) ಎಂದು ಗುರತಿಸಲಾಯಿತು. ಅದೇ ರೀತಿ ಜಪ್ತಿ ಪಡಿಸಿದ ಮು ಮಾ ನ್ನು ಈಗ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ ಪಿ 2 ರಿಂದ 12 ಎಂದು ಗುರುತಿಸಲಾಗಿದೆ. ನಂತರ ಅದೇ ದಿನ ಚಾ ಸಾ 7 ರವರ ಹೇಳಿಕೆಯನ್ನು ಪಡೆದುಕೊಂಡೆನು. ದಿ.13-04-2015 ರಂದು ಚಾ ಸಾ 4 ಮತ್ತು 5 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೇ. ದಿ.16-12-2014 ರಂದು ಆರೋಪಿತರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿ.17-04-2015 ರಂದು ಮಾನ್ಯ ನ್ಯಾಯಾಲಯಕ್ಕೆ ಅಂತಿಮ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**ಪಾಟೀಸವಾಲುಃ** ಆರೋಪಿ ಪರ ಶ್ರಿ ಎ ಎಂ ವಕೀಲರಿಂದ: ನಾನು ಜಪ್ತಿ ಪಂಚನಾಮೆಯ ಕಾಲಕ್ಕೆ ನೃಪತುಂಗಾ ಕಾಲೇಜಿನಲ್ಲಿ ಪುಸ್ತಕರಗಳನ್ನು ಜಪ್ತಿ ಮಾಡಿಲ್ಲ ಅದನ್ನು ಸೇಡಂ ಪೋಲೀಸ್ ಠಾಣೆಯಲ್ಲಿ ಜಪ್ತಿ

ಮಾಡಿರುತ್ತೇನೆ. ಪಂಚನಾಮೆಯ ಕಾಲಕ್ಕೆ ನಮಗೆ ಸದರಿ ದಾಖಲಾತಿಗಳನ್ನು ಪಡೆಯಲು ನಮ್ಮ ಇಲಾಖೆಯಿಂದ ಯಾವುದೇ ಪತ್ರವನ್ನು ಬರೆದಿಲ್ಲ.

ದಿ:09-11-2014 ರಂದು ಸದರಿ ಪ್ರಕರಣದ ಕಡತವನ್ನು ಗೌರಿಶಂಕರ್ ರವರಿಂದ ಪಡೆದುಕೊಂಡು, ಅದೇ ದಿನ ಚಾ ಸಾ 2 ಮತ್ತು 3 ರವರ ಸಮಕ್ಷಮ ಜಪ್ತಿ ಪಂಚನಾಮೆಯನ್ನು ಜರುಗಿಸಿ ನೃಪತುಂಗಾ ಕಾಲೇಜಿನಿಂದ ರಶೀದಿ ಪುಸ್ತಕ ಸಂಖ್ಯೆ 701 ರಿಂದ 800 ವರೆಗಿನ ಪುಸ್ತಕವನ್ನು, ನೃಪತುಂಗಾ ಪ್ರಥಮ ದರ್ಜೆ ವಿದ್ಯಾಲಯದ 2013 ನೇ ಸಾಲಿನ ಪುಸ್ತಕ ಸಂಖ್ಯೆ 5001 ರಿಂದ 5200 ವರೆಗೂ ಮತ್ತು ನೃಪತುಂಗಾ ಪ್ರಥಮ ದರ್ಜೆ ವಿದ್ಯಾಲಯದ 2012-2013 ನೇ ಸಾಲಿನ ಪುಸ್ತಕ ಸಂಖ್ಯೆ 5401 ರಿಂದ 5600 ವರೆಗೂ ಪುಸ್ತಕವನ್ನು ಜಪ್ತಿ ಪಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಅದೇ ರೀತಿ ಜಪ್ತಿ ಪಡಿಸಿದ ಮು ಮಾ ನ್ನು ಈಗ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ ಪಿ 2 ರಿಂದ 12 ಎಂದು ಗುರುತಿಸಲಾಗಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ಅದೇ ದಿನ ಚಾ ಸಾ 7 ರವರ ಹೇಳಿಕೆಯನ್ನು ಪಡೆದುಕೊಂಡೆನು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ದಿ.13-04-2015 ರಂದು ಚಾ ಸಾ 4 ಮತ್ತು 5 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೇ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ದಿ.16-12-2014 ರಂದು ಆರೋಪಿತರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ದಿ.17-04-2015 ರಂದು ಮಾನ್ಯ ನ್ಯಾಯಾಲಯಕ್ಕೆ ಅಂತಿಮ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

ಆರೋಪಿತರ ವಿರುದ್ದ ಯಾವುದೇ ಅಪರಾಧ ಸಾಬೀತು ಆಗದೇ ಇದ್ದರು ಚಾ ಸಾ 1 ರವರ ಕೆ ಎಸ್ ಆರ್ ಟಿ ಸಿ ವ್ಯವಸ್ಥಪಕ ಆಗಿರುವುದರಿಂದ ಅವರ ಮಾತನ್ನು ಕೇಳಿ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಿಲ್ಲ. ನಿ ಪಿ 1 ರಿಂದ 12 ಕ್ಕೂ ಹಾಗೂ ಆರೋಪಿತರಿಗೂ ಯವುದೇ ಸಂಬಂದ ಇಲ್ಲ ಎಂದರೆ ಸರಿಯಿಲ್ಲ. ಅದನ್ನು ಕಾನೂನು ನಿಯಮಗಳನ್ನು ಪಾಲಿಸಿ ಜಪ್ತಿ ಪಡಿಸಿಲ್ಲ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**